O.S. ನಂಬರಃ 35/2019
ಡಿ. ಡಬ್ಲ್ಯೂಃ 1

ದಿಃ 30-10-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

ವಾದಿಯರಿಗೆ ಬಾವಿ ನೀರನ್ನು ತೆಗೆದುಕೊಂಡು ಹೋಗುವ ಹಕ್ಕು ನಮೂದು ಇರುವ ಬಗ್ಗೆ ನಿಪಿ-9 ದಸ್ತಾವೇಜನ್ನು ಓದಿರುತ್ತೀರಾ ಎಂದರೆ ಸಾಕ್ಷಿಯು ಅದು ನನ್ನ ಹತ್ತಿರ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಸ್ತಾವೇಜನ್ನು ನ್ಯಾಯಾಲಯದಿಂದ ಪಡೆದುಕೊಂಡು ಓದಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇತ್ತು, ಅದರ ಬಗ್ಗೆ ಯಾವುದೇ ವಿಚಾರಣೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಇಂದಿನವರೆಗೆ ಬಾವಿಗೆ ಎಷ್ಟು ಪಂಪುಗಳು ಇರುತ್ತವೆ ಎಂದರೆ ಸಾಕ್ಷಿಯು 2 ಇರುತ್ತವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವೆರೆದು ನ್ಯಾಯಾಲಯಕ್ಕೆ ಬರಬೇಕಾದರೆ 2 ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಈಗ ನಾನು ನೋಡಿರುವುದಿಲ್ಲ, ಆಗ ಹಾಕಿದ್ದು ಈಗಲೂ ಹಾಗೆ ಇರಬಹುದು ಎಂದು ನುಡಿಯುತ್ತಾರೆ. ಒಂದು ಪಂಪನ್ನು ನೀವು ಹಾಕಿದ್ದು, ಇನ್ನೊಂದನ್ನು ಯಾರು ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಾವು ಇಲ್ಲದಾಗ ವಾದಿಯರು ಹಾಕಿರಬಹುದು ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ನೀವು ಇರಲಿಲ್ಲ ಎಂದರೆ ಸಾಕ್ಷಿಯು

ಅಕ್ಟೋಬರ್-2014 ರಲ್ಲಿ ನನ್ನ ತಂದೆಯವರು 2 ತಿಂಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ಪ್ರತಿವಾದ ಪತ್ರದಲ್ಲಿ ನಮ್ಮ ತಂದೆಯವರಿಗೆ ಹುಷಾರು ಇಲ್ಲದ ಸಮಯದಲ್ಲಿ ವಾದಿಯರು ಪಂಪಸೆಟ್ ಹಾಕಿರುತ್ತಾರೆ ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರ ಮುಖಾಂತರ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಪಂಪ್ ಸೆಟ್ ತೆಗೆಯಿಸಲು ದೂರನ್ನು ಕೊಟ್ಟಿರುತ್ತೀರಾ ಅಥವಾ ಯಾವುದಾದರೂ ಕಾನೂನು ಕ್ರಮಯನ್ನು ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನು ದೂರನ್ನು ಕೊಡಲು ಹೋದಾಗ ಪೊಲೀಸರು ದೂರನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ತಕರಾರಿ ಬಾವಿಯಿಂದ ನೀರನ್ನು ವಾದಿಯರು ಇಸಮೆಂಟರಿ ಹಕ್ಕು ನಾತೆಯಿಂದ ಪಡೆಯಲು ಹಕ್ಕುದಾರರು ಇರುತ್ತಾರೆ ಎಂದು 1976 ರ ದಸ್ತಾವೇಜಿನಲ್ಲಿ ಬರೆಯಲಾಗಿದೆ ಎಂದರೆ ಬರೆದಿರಬಹುದು ಎಂದು ನುಡಿಯುತ್ತಾರೆ. ಈಗ ನೀವು ಮತ್ತು ನಿಮ್ಮ ಕುಟುಂಬದವರು 2019ರಲ್ಲಿ ವಾದಿಯರಿಗೆ ತಕರಾರಿ ಬಾವಿಯಿಂದ ನೀರನ್ನು ಪಡೆದುಕೊಂಡು ಹೋಗಲು ತಕರಾರು ಮಾಡಿದ್ದರಿಂದ ಈ ದಾವೆಯನ್ನು ಸಲ್ಲಿಸಬೇಕಾದ ಪ್ರಸಂಗ ಬಂದಿರುತ್ತದೆ ಎಂದರೆ ಸರಿ. ನಿಮ್ಮ ಕಿರುಕುಳ ತಡೆಯಲಾರದೆ ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಹಳೆಯ ಬಾವಿಯಲ್ಲಿ ನೀರನ್ನು ತೆಗೆದುಕೊಂಡು ಹೋಗುವ ಹಕ್ಕು ಇರಬಹುದು, ಆದರೆ ಹೊಸ ಬಾವಿಯಲ್ಲಿ ಯಾರ್ಯಾರಿಗೋ ನೀರನ್ನು ಕೊಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನೀವು ಇಂದಿನವರೆಗೆ ನಿಮ್ಮ ಜಮೀನಿನಲ್ಲಿ ಹೊಸದಾಗಿ ಬಾವಿಯನ್ನು ತೆಗೆಸಿದ್ದು ಇರುವುದಿಲ್ಲ ಎಂದರೆ ಸರಿ. 1984 ರಲ್ಲಿ ನಾವೇ ಬಾವಿಯನ್ನು ತೆಗೆಸಿರುತ್ತೇವೆ

ಎಂದು ನುಡಿಯುತ್ತಾರೆ. ನಿಮ್ಮ ಹುಟ್ಟಿದ ವರ್ಷ ಯಾವುದು ಎಂದರೆ ಸಾಕ್ಷಿಯು 1979 ಎಂದು ನುಡಿಯುತ್ತಾರೆ. ನೀವು ವಾದಿಯರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪರವಾಗಿ ಯಾರಾದರೂ ಸಾಕ್ಷಿದಾರರು ಇದ್ದಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.